
Nikon

# **ಅವಿನಾಶ್ ಪ್ಯಾಶ್‌ರಿಚಾ** ಅವರನ್ನು ನೆನೆಯುತ್ತಾ......

ಅವಿನಾಶ್ ಪ್ಯಾಶ್‌ರಿಚಾ ನಮ್ಮ ನಡುವಿನ ಅಪರೂಪದ ಛಾಯಾಗ್ರಾಹಕರು. ಕಲಾಪ್ರಪಂಚಕ್ಕೆ ಅವರನ್ನು ಪರಿಚಯಿಸುವ ಅವಶ್ಯಕತೆಯಿಲ್ಲ. ನೃತ್ಯ ಹಾಗೂ ಸಂಗೀತದ ಛಾಯಾಚಿತ್ರಣದಲ್ಲಿ ಅವರು ಆದ್ಯರು. ತಮ್ಮ ಕಾಲದ ಎಲ್ಲಾ ಸಂಗೀತ–ನೃತ್ಯ ಕಲಾವಿದರನ್ನು ತಮ್ಮ ಕ್ಯಾಮೆರಾದಲ್ಲಿ ಸೆರೆ ಹಿಡಿದಿರುವ ಖ್ಯಾತಿ ಅವರದು. ಅವರ ಬಳಿ ಭಾರತೀಯ ಕಲಾವಿದರ ಮೂರು ಲಕ್ಷಕ್ಕೂ ಹೆಚ್ಚು ಛಾಯಾಚಿತ್ರಗಳಿವೆ. ಐದು ದಶಕಗಳಿಗೂ ಹೆಚ್ಚು ಕಾಲ ಅಷ್ಟು ಹತ್ತಿರದಿಂದ ಭಾರತೀಯ ಕಲೆಯನ್ನು ಸೆರೆಹಿಡಿದ ಅವರ ಅನುಭವಕ್ಕೆ ಸಾಟಿಯಾಗುವಂತಹ ಅನುಭವವೇ ಇಲ್ಲ. ಇಂತಹ ಮೇರುಕಲಾವಿದ ರಾಗಮಾಲಾಗೆ ಪ್ರೋತ್ಸಾಹ ನೀಡುತ್ತಿರುವುದು ಅವರ ದೊಡ್ಡತನವನ್ನು ತೋರಿಸುತ್ತದೆ. ಇದನ್ನು ನಮ್ಮ ಪುಣ್ಯವೆಂದೇ ಭಾವಿಸುತ್ತೇವೆ. ಅವರ ಬೆಂಬಲವಿಲ್ಲದೇ ಹೋಗಿದ್ದಲ್ಲಿ ನಮ್ಮ ಎಷ್ಟೋ ಪ್ರಕಟಣೆಗಳು ಸಾಧ್ಯವೇ ಆಗುತ್ತಿರಲಿಲ್ಲ. ರಾಗಮಾಲಾ ಪ್ರಕಟಿಸುತ್ತಿರುವ ಪುಸ್ತಕಗಳಲ್ಲಿ ಬಳಸುತ್ತಿರುವ ಹೆಚ್ಚಿನ ಛಾಯಾಚಿತ್ರಗಳು ಅವಿನಾಶ್ ಅವರದ್ದು. ಅವರು ತೆಗೆದ ಎಂ.ಎಸ್. ಸುಬ್ಬುಲಕ್ಷ್ಮಿ ಹಾಗೂ ರವಿಶಂಕರರ ಛಾಯಾಚಿತ್ರಗಳು ರಾಗಮಾಲಾಕ್ಕೆ ಘನತೆಯನ್ನು ತಂದುಕೊಟ್ಟಿವೆ.

ಯಾವುದೇ ನಿರೀಕ್ಷೆಯಿಲ್ಲದೆ, ನಮ್ಮ ನೇರ ಪರಿಚಯವೂ ಇಲ್ಲದೆ, ತಾವು ಐವತ್ತು ವರ್ಷಗಳಿಗೂ ಹೆಚ್ಚು ಕಾಲ ದಾಖಲಿಸಿದ ಸಂಗೀತಗಾರರ ಫೋಟೊಗಳನ್ನು ಪ್ರತಿಫಲಾಪೇಕ್ಷೆ ಇಲ್ಲದೆ ನಮಗೆ ನೀಡುತ್ತಾ ಬಂದಿದ್ದಾರೆ. ಅಷ್ಟೇ ಅಲ್ಲ, ದೀಪಕ್ ಎಸ್ ರಾಜ ಅವರಂತಹ ರಾಷ್ಟ್ರೀಯ ಮಟ್ಟದ ಸಿತಾರ್‌ವಾದಕ ಮತ್ತು ಸಂಗೀತಶಾಸ್ತ್ರಜ್ಞರಿಗೂ ನಮಗೆ ನೆರವಾಗುವಂತೆ ಪತ್ರ ಬರೆದು, ಕೇಳಿಕೊಂಡಿದ್ದಾರೆ. ಇವರ ನೆರವು ಕೇವಲ ರಾಗಮಾಲಾಗೆ ಮಾತ್ರ ಸೀಮಿತವಾಗಿಲ್ಲ. ಕಲೆಯನ್ನು ಕುರಿತ ಎಲ್ಲಾ ಪ್ರಯತ್ನಗಳಿಗೂ ಇವರ ಬೆಂಬಲ ಸದಾ ಇದೆ. ಮದ್ರಾಸಿನ ಪ್ರಖ್ಯಾತ ಪತ್ರಿಕೆ "ಶ್ರುತಿ"ಯ ಎಲ್ಲಾ ಸಂಪುಟಗಳಲ್ಲೂ ಇವರ ಛಾಯಾಚಿತ್ರಗಳು ಇದ್ದೇ ಇರುತ್ತವೆ. ಜೊತೆಗೆ ಮದ್ರಾಸಿನಲ್ಲಿರುವ 'ಸಮುದ್ರಿ' ಸಂಗ್ರಹಾಲಯಕ್ಕೆ ತಮ್ಮ ಎಲ್ಲಾ ಛಾಯಾಚಿತ್ರಗಳನ್ನು ನೀಡಿದ್ದಾರೆ. ಇವರ

ಛಾಯಾಚಿತ್ರಗಳನ್ನೇ ಆಧರಿಸಿ ಹಲವು ಸಂಗೀತ–ನೃತ್ಯ ಕಲಾವಿದರ ಪುಸ್ತಕಗಳು ಬಂದಿವೆ. ಸುಮಾರು ಐದು ದಶಕಗಳಿಗೂ ಹೆಚ್ಚು ತಮ್ಮ ಕ್ಯಾಮೆರಾ ಮೂಲಕ ಕಲಾವಿದರ ಭಾವನೆಗಳನ್ನು, ಅಭಿವ್ಯಕ್ತಿಗಳನ್ನು ದಾಖಲಿಸುತ್ತಿರುವ ಅವಿನಾಶ್ ಪ್ಯಾಸ್‌ರಿಚಾ ಛಾಯಾಚಿತ್ರ ಕಲೆಯ ವಾತಾವರಣದಲ್ಲೇ ಬೆಳೆದವರು. ಇವರ ತಂದೆ ಒಬ್ಬ ಪೋರ್ಟ್ರೇಟ್ ಛಾಯಾಗ್ರಾಹಕರು. ತಂದೆಯವರ ಕೆಲಸವನ್ನು ನೋಡುತ್ತಾ ನೋಡುತ್ತಾ ಪ್ಯಾಶ್‌ರಿಚಾ ಬೆಳೆದರು. ಕ್ಯಾಮರಾ ಕ್ಲಿಕ್ಕಿಸುವ ಜೊತೆಗೆ ಕತ್ತಲೆಯ ಕೋಣೆಯಲ್ಲಿ ಫೋಟೋಗಳನ್ನು ಸಂಸ್ಕರಿಸುವ ಕಲೆಯನ್ನು ಕಲಿತರು. ಛಾಯಾಗ್ರಹಣದ ಸಂಪೂರ್ಣ ತಂತ್ರಗಾರಿಕೆ, ಅದರ ಸೂಕ್ಷ್ಮಗಳು ಮುಂತಾದವುಗಳನ್ನು ರೂಢಿಸಿಕೊಂಡರು. ಆ ವೇಳೆಗೆ ಪ್ರಖ್ಯಾತ ಸ್ಪ್ಯಾನ್ ಪತ್ರಿಕೆ ಪ್ರಾರಂಭವಾಗಿತ್ತು. ಅದರ ಫೋಟೋ ಸಂಪಾದಕರಾಗಿ ಸೇರಿಕೊಂಡರು. ಅಲ್ಲಿಂದ ಅವರ ಛಾಯಾಗ್ರಹಣದ ಪಯಣ ಆರಂಭ. ಆಗ ಮುದ್ರಣ ಕಲೆ ಇಷ್ಟೊಂದು ಮುಂದುವರೆದಿರಲಿಲ್ಲ. ಬ್ಲಾಕ್‌ಗಳನ್ನು ಕಲ್ಕತ್ತದಲ್ಲಿ ಮಾಡಿಸುತ್ತಿದ್ದರು. ಮುದ್ರಣ ಬಾಂಬೆಯಲ್ಲಿ ಆಗುತ್ತಿತ್ತು. ಅವರು 1960ರಿಂದ 1997ರವರೆಗೆ ಅಂದರೆ ಮೂವತ್ತೇಳು ವರ್ಷಗಳು ಆ ಪತ್ರಿಕೆಯ ಫೋಟೋ ಸಂಪಾದಕರಾಗಿ ಕಾರ್ಯನಿರ್ವಹಿಸಿದರು. ಆ ಪತ್ರಿಕೆಗೆ "ಸ್ಟೋರಿ" ಮಾಡಲು ತಮ್ಮ ರೋಲಿಫ್ಲೆಕ್ಸ್ ಕ್ಯಾಮೆರಾ ಹಿಡಿದು ದೇಶದ ಉದ್ದಗಲಕ್ಕೂ ಅಲೆದರು.

## ನೃತ್ಯ ಹಾಗೂ ಸಂಗೀತದ ಬೆನ್ನು ಹತ್ತಿ

ಪ್ಯಾಶ್‌ರಿಚಾ ಅವರ ಕಸಿನ್ ಒಬ್ಬರಿಗೆ ಸಂಗೀತದಲ್ಲಿ ತುಂಬಾ ಆಸಕ್ತಿಯಿತ್ತು. ಅವರು ಹಿಂದುಸ್ತಾನಿ ಸಂಗೀತ ಕಾರ್ಯಕ್ರಮಗಳಿಗೆ ಆಗಾಗ ಹೋಗುತ್ತಿದ್ದರು. ಸ್ಪ್ಯಾನ್ ಪತ್ರಿಕೆಯಲ್ಲಿದ್ದ ಪ್ಯಾಶ್‌ರಿಚಾ ಆಗ ಕಪ್ಪು ಬಿಳುಪು ಮಾಧ್ಯಮದಲ್ಲಿ ಕೆಲಸ ಮಾಡುತ್ತಿದ್ದರು. ತಮ್ಮ ಕಸಿನ್ ಜೊತೆಯಲ್ಲಿ ಇವರು ಸಂಗೀತ ಕಾರ್ಯಕ್ರಮಗಳಿಗೆ ಹೋಗುತ್ತಿದ್ದರು. "ಆಗ ನನಗೆ ಸಂಗೀತದ ಗಂಧ ಇರಲಿಲ್ಲ. ನಾನು ನನ್ನ ಕ್ಯಾಮೆರಾದಲ್ಲಿ ಕಲಾವಿದರ ಮೂಡನ್ನು ಸೆರೆಹಿಡಿಯಲು ಪ್ರಯತ್ನಿಸುತ್ತಿದ್ದೆ. ಹಾಗೆ ಫೋಟೋ ತೆಗೆಯುವಾಗ ಕಲಾವಿದರಿಗೆ ಅಥವಾ ಪ್ರೇಕ್ಷಕರಿಗೆ ತೊಂದರೆಯಾಗಬಹುದು ಎಂದು ಆಗ ನಾನು ಯೋಚಿಸುತ್ತಲೇ ಇರಲಿಲ್ಲ. ಓಡಾಡಿಕೊಂಡು ಚಿತ್ರಗಳನ್ನು ತೆಗೆಯುತ್ತಿದ್ದೆ. ಬಹುಶಃ ಅತ್ಯುತ್ತಮ ಫೋಟೋಗಳನ್ನು ನಾನು ತೆಗೆದದ್ದು ಆ ಸಂದರ್ಭದಲ್ಲೇ ಅಂತ ಕಾಣುತ್ತದೆ. ಆದರೆ ಈಗ ಕಲಾವಿದರಿಗೆ ಹಾಗೂ ಪ್ರೇಕ್ಷಕರಿಗೆ ಕಿರಿಕಿರಿಯಾಗಬಹುದು ಎಂದು ತುಂಬಾ ಕಾನ್ಷಸ್ ಆಗಿದ್ದೇನೆ." ಎನ್ನುತ್ತಾರೆ ಪ್ಯಾಶ್‌ರಿಚಾ.

ಸಂಗೀತಗಾರರನ್ನು ಕುರಿತ ತಮ್ಮ ಫೋಟೊಗಳ ಬಗ್ಗೆ ಕೇಳಿದಾಗ ಅವರು ಹೇಳುವುದು ಇಷ್ಟು: "ನಾನು ಬಹುಶಃ ಐದು ವರ್ಷಕ್ಕೆ ಒಮ್ಮೆ ಒಳ್ಳೆಯ ಫೋಟೊ ತೆಗೆಯುತ್ತೇನೆ ಅನ್ನಿಸುತ್ತದೆ. ಅದಕ್ಕಿಂತ ಜಾಸ್ತಿ ಸಾಧ್ಯವಿಲ್ಲ. ಅವುಗಳಲ್ಲಿ ಸುಬ್ಬುಲಕ್ಷ್ಮಿ ಹಾಡುತ್ತಿರುವ ಫೋಟೊ ಒಂದು. ಅದು ಸಂಪೂರ್ಣ ಅದೃಷ್ಟ ಅಷ್ಟೆ. ಆ ಚಿತ್ರ ಆಕೆಯ ಭಕ್ತಿಯ ಕ್ಷಣವನ್ನು ಸೊಗಸಾಗಿ ಸೆರೆಹಿಡಿದಿದೆ ಅನ್ನಿಸುತ್ತದೆ. ಸುಬ್ಬುಲಕ್ಷ್ಮಿ ಹೆಸರುವಾಸಿಯಾಗಿರುವುದೇ ಆ ಭಕ್ತಿಭಾವಕ್ಕೆ. ಅದೇ ರೀತಿಯಲ್ಲಿ ನಾನು 1960ರಲ್ಲಿ ತೆಗೆದ ಪಂಡಿತ್ ಜಸರಾಜ್ ಅವರ ಚಿತ್ರಗಳನ್ನು ತೋರಿಸಬಲ್ಲೆ. ಅಲ್ಲಿ ಕೂಡ ಮಾತಿನ ನೆರವಿಲ್ಲದೆ ಅವರ ಬದುಕನ್ನು ಚಿತ್ರದಲ್ಲಿ ಮೂಡಿಸಲು ಸಾಧ್ಯವಾಗಿದೆ ಅನ್ನಿಸುತ್ತದೆ. ಶಿವಕುಮಾರ್ ಶರ್ಮ ಹಾಗೂ ಭೀಮಸೇನ ಜೋಷಿಯವರ ಇಂತಹ ಒಂದೆರಡು ಚಿತ್ರಗಳಿವೆ . . ." ಎನ್ನುತ್ತಾರೆ.

ಸಂಗೀತಗಾರರ ಫೋಟೊಗಳನ್ನು ಸಾಕಷ್ಟು ತೆಗೆದಿದ್ದರೂ ಅವರ ಒಲವು ಮಾತ್ರ ಹೆಚ್ಚಾಗಿ ನೃತ್ಯದೆಡೆಗೇ. "ಅದಕ್ಕೇ ಅಂಟಿಕೊಂಡಿದ್ದೇನೆ. ಅದರಿಂದ ಹೊರಬರುವುದಕ್ಕೆ ಆಗುತ್ತಿಲ್ಲ." ಈ ಕ್ಷೇತ್ರದಲ್ಲಿ ಅವರು ಮಾಡಿರುವ ಕೆಲಸ ಅಪಾರ. ಅವರ ಬೆಳಕಿನ ತಂತ್ರ ಎಲ್ಲರ ಮೆಚ್ಚುಗೆ ಗಳಿಸಿದೆ. ಇದನ್ನು ಹಲವರು ಅನುಕರಿಸಿದ್ದಾರೆ. ಅವರು ತೆಗೆದಿರುವ ನೃತ್ಯದ ಮೊದಲ ಛಾಯಾಚಿತ್ರ ಇಂದ್ರಾಣಿ ರೆಹಮಾನ್ ಅವರದ್ದು. ಆ ಛಾಯಾಚಿತ್ರಗಳನ್ನು ಸ್ಪ್ಯಾನ್ ಪತ್ರಿಕೆಗಾಗಿ ಫ್ಲಾಷ್ ಬಳಸಿ ತೆಗೆದಿದ್ದರು. ನಂತರ ಅವರು ವಿಶೇಷ ಸಂಸ್ಕರಣಾ ವಿಧಾನವನ್ನು ಬಳಸಿ 400 ಎಎಸ್‌ಎ ಫಿಲ್ಮನ್ನೇ 1200 ಎಎಸ್‌ಎ ಫಿಲ್ಮ್ ಆಗಿ ಬಳಸುವ ಪ್ರಯೋಗ ಮಾಡುತ್ತಿದ್ದರು. ಇದರಿಂದ ಅವರಿಗೆ ಫ್ಲಾಷ್ ಬಳಸದೇ ಇರುವಷ್ಟೇ ಬೆಳಕನ್ನು ಬಳಸಿಕೊಂಡು ಛಾಯಾಚಿತ್ರ

ಮಾಡುವುದು ಸಾಧ್ಯವಾಯಿತು. ಆಗ ತೆಗೆದ ಕೆಲವು ಚಿತ್ರಗಳಿಂದ ಪ್ರೇರೇಪಿತರಾಗಿ ಸಂಗೀತದ 'ಮೂಡ್' ಸೆರೆಹಿಡಿಯಲು ಪ್ರಾರಂಭಿಸಿದರು. ಕ್ರಮೇಣ ಅವರ ಒಲವು ನೃತ್ಯದ ಕಡೆಗೆ ತಿರುಗಿತು. ಅದು ಹೆಚ್ಚು ವಿಷುಯಲ್ ಆಗಿ ಅವರಿಗೆ ತೋರಿರಬೇಕು.

ಅದು ಟೆಲಿಲೆನ್ಸ್ ಕಾಲವಲ್ಲ. ಹತ್ತಿರ ಹೋಗಿ ತೆಗೆಯಬೇಕಿತ್ತು, ಎಷ್ಟೇ ಹತ್ತಿರ ಹೋಗಿ ತೆಗೆದರೂ ಫೋಟೋಗಳು ಸಣ್ಣದಾಗಿಯೇ ಕಾಣುತ್ತಿತ್ತು. ಆಗ ಚಿತ್ರಗಳನ್ನು ಸಂಸ್ಕರಿಸುವ ಕ್ರಮವೂ ಬೇರೆಯದೇ ಆಗಿತ್ತು. ಆಗ ಬಳಸುತ್ತಿದ್ದ ರಾಸಾಯನಿಕಗಳಿಂದ ಚಿತ್ರಗಳು ಹಸಿರಾಗಿ ಕಾಣುತ್ತಿದ್ದವು. ಹೆಚ್ಚಿನ ಛಾಯಾಗ್ರಾಹಕರು ನೃತ್ಯಗಾರರನ್ನು ಒಂದು ವಿಗ್ರಹದಂತೆ ಸೆರೆಹಿಡಿಯುತ್ತಿದ್ದರು. ಸೌಂದರ್ಯ ಅಂದರೆ ಅವರ ವೇಷಭೂಷಣದ ಮತ್ತು ಮೈಮಾಟದ ಸೌಂದರ್ಯ ಎಂದೇ ತೋರುತ್ತಿತ್ತು. ನೃತ್ಯದಲ್ಲೇ ಇರುವ ಸೌಂದರ್ಯ ಅವರಿಗೆ ಕಾಣುತ್ತಿರಲಿಲ್ಲ. ವೇಷಭೂಷಣ, ಕಲಾವಿದರ ಸೌಂದರ್ಯ ಮುಂತಾದವುಗಳನ್ನು ಮೀರಿ ನೃತ್ಯದಲ್ಲೇ ಇರುವ ಸೌಂದರ್ಯವನ್ನು ಕಂಡದ್ದು, ಅದನ್ನು ಸೆರೆಹಿಡಿದದ್ದು ಪ್ಯಾಶ್‌ರಿಚಾ ಅವರ ಹೆಚ್ಚುಗಾರಿಕೆ. ಇಂತಹ ಚಿತ್ರಗಳನ್ನು ಸೆರೆಹಿಡಿಯುವಾಗ ಅವರ ಗಮನವೆಲ್ಲಾ ಕಲಾವಿದನ ಕಣ್ಣಿನ ಮೇಲಿರುತ್ತದೆ. "ನನ್ನ ದೃಷ್ಟಿಯಲ್ಲಿ ನೃತ್ಯ ಇರುವುದು ಕಣ್ಣಲ್ಲಿ. ಅದನ್ನು ಸೆರೆಹಿಡಿಯುವುದು ನಿಮಗೆ ಸಾಧ್ಯವಾದರೆ ನೀವು ಒಬ್ಬ ಡ್ಯಾನ್ಸ್ ಛಾಯಾಗ್ರಾಹಕ. ಯಾವುದೋ ಕೆಲವು ಘಳಿಗೆಗಳಲ್ಲಿ ಮಾತ್ರ ನಿಮಗೆ ಆ ಭಾವ ಸಿಗುತ್ತದೆ. ಆಗ ನೀವದನ್ನು ಸೆರೆ ಹಿಡಿಯಬೇಕು. ಅದು ಕೈಜಾರಿದರೆ ಕಳೆದುಕೊಂಡು ಬಿಡುತ್ತೀರಿ" ಅನ್ನುತ್ತಾರೆ ಪ್ಯಾಶ್‌ರಿಚಾ.

ಪ್ರಖ್ಯಾತ ನೃತ್ಯ ಇತಿಹಾಸಕಾರ ಹಾಗೂ ವಿಮರ್ಶಕ ಸುನಿಲ್ ಕೊಠಾರಿಯವರ ಸಹಯೋಗದಲ್ಲಿ ವಿಶೇಷವಾಗಿ ಕುಚುಪುಡಿ ನೃತ್ಯದ ಬಗ್ಗೆ ಪುಸ್ತಕವೊಂದನ್ನು ರಚಿಸಿದ್ದಾರೆ. ಅದರಲ್ಲಿರುವ ಸ್ವಪ್ನಸುಂದರಿಯವರ ಅಭಿನಯದ ಛಾಯಾಚಿತ್ರಗಳು ಬಹುಶಃ ಆ ನೃತ್ಯಪ್ರಕಾರದ ಅತ್ಯುತ್ತಮ ದಾಖಲೆ.


ಅವರೇ ಹೇಳಿಕೊಂಡಿರುವಂತೆ ಪ್ರಾರಂಭದಲ್ಲಿ ಅವರಿಗೆ ಭಾರತೀಯ ಶಾಸ್ತ್ರೀಯ ಸಂಗೀತ ಹಾಗೂ ನೃತ್ಯದ ಬಗ್ಗೆ ಅಂತಹ ಆಸಕ್ತಿಯೇನಿರಲಿಲ್ಲ. ಆದರೆ ನೃತ್ಯ ಹಾಗೂ ಸಂಗೀತದ ಹಿಂದೆ ಕ್ಯಾಮೆರಾ ಹಿಡಿದು ಹೊರಟ ಮೇಲೆ ಅದರ ಸೊಗಸು ರುಚಿ ಅವರಿಗೆ ಪ್ರಿಯವಾಗಿದೆ. ಇದು ಅವರಿಗೆ ತೃಪ್ತಿಯನ್ನೂ ಸಂತೋಷವನ್ನೂ ನೀಡುತ್ತಿದೆ. ಅವಕಾಶ ಸಿಕ್ಕಾಗಲೆಲ್ಲಾ ಪತ್ನಿಯೊಂದಿಗೆ ಕಾರ್ಯಕ್ರಮಕ್ಕೆ ಹೋಗುತ್ತಾರೆ. ಸಂಗೀತ ಹಾಗೂ ನೃತ್ಯವನ್ನು ಸೂಕ್ಷ್ಮವಾಗಿ ಅನುಭವಿಸಬಲ್ಲ, ಅದರ ಸೂಕ್ಷ್ಮ ಕ್ಷಣಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯಬಲ್ಲ ಕಲಾವಿದ ಇಂದು ನಮ್ಮೊಂದಿಗಿದ್ದಾರೆ. ಈ ವೃತ್ತಿ ಹಣಕಾಸಿನ ದೃಷ್ಟಿಯಿಂದ ಅವರಿಗೆ ಅಂತಹ ಲಾಭದಾಯಕವೇನಲ್ಲ. ಹಾಗಿದ್ದರೂ ಅದು ಕೊಡುವ ಸಂತೋಷಕ್ಕಾಗಿಯೇ ಅದರಲ್ಲಿ ತೊಡಗಿಕೊಂಡಿರುವ ಪ್ಯಾಶ್‌ರಿಚಾ ಅವರ ಚಿತ್ರಗಳ ಭಂಡಾರವೇ ಇಂದು ನಮ್ಮ ಮುಂದಿದೆ. ಬಹುಶಃ ಅವರು ಈ ಕೆಲಸ ಮಾಡದೇ ಹೋಗಿದ್ದರೆ ಎಂತಹ ದೊಡ್ಡ ನಷ್ಟವಾಗುತ್ತಿತ್ತು ಎನ್ನುವುದನ್ನು ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ.

ಮೂರು ಲಕ್ಷಕ್ಕೂ ಮೀರಿದ ಅವರ ಸಂಗ್ರಹದಿಂದ ಆಯ್ದ ಕಲಾವಿದರ ಕೆಲವು ಫೋಟೋಗಳನ್ನಷ್ಟೇ ಆಯ್ಕೆ ಮಾಡಿಕೊಂಡು ರಾಗಮಾಲಾದ ಈ ಸಂಚಿಕೆಯನ್ನು ಸಿದ್ಧಪಡಿಸುತ್ತಿದ್ದೇವೆ. ಪ್ಯಾಶ್‌ರಿಚಾ ಅವರ ಈ ಸಂಗ್ರಹದಲ್ಲಿರುವ ಕಲಾವಿದರ ಸಂಗೀತದ ಬದುಕನ್ನು ಕುರಿತಂತೆ ತಮ್ಮ ಲೇಖನಗಳನ್ನು ಬಳಸಿಕೊಳ್ಳಲು ಪ್ರಖ್ಯಾತ ಸಿತಾರ್‌ವಾದಕ ಹಾಗೂ ಸಂಗೀತಶಾಸ್ತ್ರಜ್ಞ ದೀಪಕ್ ಎಸ್ ರಾಜ ಅವರು ಒಪ್ಪಿಗೆ ನೀಡಿದ್ದಾರೆ. ಹಿಂದುಸ್ತಾನಿ ಸಂಗೀತವನ್ನು ಕುರಿತಂತೆ ತಮ್ಮ ಬರಹ, ಪುಸ್ತಕಗಳು ಮತ್ತು ಚಿಂತನೆಗಳಿಂದ ಈಗಾಗಲೇ ಅವರು ಎಲ್ಲರಿಗೂ ಪರಿಚಿತರು. ಇಲ್ಲಿಯ ಛಾಯಾಚಿತ್ರಗಳು ಮತ್ತು ಆಯಾ ಕಲಾವಿದರನ್ನು ಕುರಿತ ದೀಪಕ್ ಎಸ್ ರಾಜ ಅವರ ಲೇಖನಗಳು ಈ ಸಂಗೀತಗಾರರ ಬದುಕನ್ನು ಅರ್ಥಮಾಡಿಕೊಳ್ಳಲು ಓದುಗರಿಗೆ ನೆರವಾಗಬಹುದು ಎಂದುಕೊಂಡಿದ್ದೇವೆ.

# ಹಿಂದುಸ್ತಾನಿ ಸಂಗೀತದ ಮಹಾನ್ ಬಂಡುಕೋರ **ಪಂಡಿತ್ ಕುಮಾರ ಗಂಧರ್ವ**

20ನೇ ಶತಮಾನದ ಹಿಂದುಸ್ತಾನಿ ಗಾಯಕರಲ್ಲಿ ಪಂಡಿತ್ ಕುಮಾರ ಗಂಧರ್ವ ಅತ್ಯಂತ ಸ್ವಂತಿಕೆಯ ಗಾಯಕರು. ಆದರೆ ಅಷ್ಟೇ ವಿವಾದಾತ್ಮಕ ಗಾಯಕರು. ಅವರ ಸಂಗೀತಕ್ಕೆ ಬಂದದ್ದು ಕೂಡ ಅತಿರೇಕದ ಪ್ರತಿಕ್ರಿಯೆಗಳೇ. ಒಂದೆಡೆ ಹುಚ್ಚು ಎನಿಸಬಹುದಾದಷ್ಟು ಅತಿಯಾದ ಮೆಚ್ಚುಗೆ, ಮತ್ತೊಂದೆಡೆ ಅಷ್ಟೇ ಅತಿಯಾದ ಕಟುವಿರೋಧ. ಅದೇನೇ ಇರಲಿ, ಸಂಗೀತದಲ್ಲಿ ಅವರಿಗಿದ್ದ ಪಾಂಡಿತ್ಯ ಮಾತ್ರ ವಿವಾದಾತೀತ. ಅವರು ಸಂಗೀತಲೋಕಕ್ಕೆ ವಿದಾಯ ಹೇಳುವ ಹೊತ್ತಿಗೆ ಪದ್ಮಭೂಷಣ, ಪದ್ಮವಿಭೂಷಣ, ಕಾಳಿದಾಸ ಸಮ್ಮಾನ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಎಲ್ಲವೂ ಅವರ ಮುಡಿಯಲ್ಲಿತ್ತು. ಇವುಗಳ ಜೊತೆಗೆ ಅಕಾಡೆಮಿಯ ಫೆಲೋ ಕೂಡ ಆಗಿದ್ದರು.

ಕುಮಾರ ಗಂಧರ್ವ ಹಿಂದುಸ್ತಾನಿ ಸಂಗೀತದ ಒಬ್ಬ ಮಹಾನ್ ಬಂಡುಕೋರ ಮಾತ್ರವಲ್ಲ, ಅವರೊಬ್ಬ ಅದ್ಭುತವಾದ ಸಂಗೀತಗಾರ. 20ನೇ ಶತಮಾನದ ಇನ್ಯಾವ ಗಾಯಕರ ಪ್ರಭಾವವೂ ಕುಮಾರ ಗಂಧರ್ವರ ಸಂಗೀತದಲ್ಲಿ ಲವಲೇಶವೂ ಕಾಣುವುದಿಲ್ಲ. ಅವರು ಖಯಾಲ್ ಪ್ರಸ್ತುತಿಯ ರಾಚನಿಕ ವಿನ್ಯಾಸವನ್ನು ಸಾರಾಸಗಟಾಗಿ ತಿರಸ್ಕರಿಸಿದರು. ಹೊಸ ರಾಗಗಳು, ಹೊಸ ಬಂದಿಶ್‌ಗಳು, ಶಾರೀರವನ್ನು ಹೊಸ ಶೈಲಿಯಲ್ಲಿ ದುಡಿಸಿಕೊಳ್ಳುವ ಬಗೆ ಮತ್ತು ರಾಗವಿನ್ಯಾಸವನ್ನು ನಿರ್ವಹಿಸುವ ನವೀನ ಕ್ರಮ ಮುಂತಾದವನ್ನು ಸೃಷ್ಟಿಸಿದರು. ಅವರ ಸಂಗೀತ ಚೇತೋಹಾರಿಯಾಗಿ, ತನ್ನ ಉತ್ಸಾಹ, ಹುರುಪು ಹಾಗೂ ನಾಟಕೀಯತೆಯಿಂದಾಗಿ ಮೈಮರೆಸುತ್ತಿತ್ತು. ಆದರೆ ಅವರು ಹಾಡಿ ಮುಗಿಸಿದ ನಂತರ ಆ ಸಂಗೀತವನ್ನು ತೂಗಿ ವಿಶ್ಲೇಷಿಸುವುದಕ್ಕೆ ಒಂದು ಸಿದ್ಧ ಅಳತೆಗೋಲು ಇರಲಿಲ್ಲ. ಅವರ ಪ್ರಸ್ತುತಿಗೆ ಅವರದ್ದೇ ಆದ ಒಂದು ನಿರ್ದಿಷ್ಟ ಕಟ್ಟಾಣಿಕೆ (architecture) ಇದ್ದಿದ್ದರೆ, ಅವರೊಂದು ಹೊಸ ಘರಾನೆಯ ಪ್ರವರ್ತಕರೇ ಆಗುತ್ತಿದ್ದರೇನೋ!





ಗಂಧರ್ವ ಅವರನ್ನು ತುಂಬಾ ಸಹಾನುಭೂತಿಯಿಂದ ನೋಡುವ ವಿಮರ್ಶಕರಾದ ವಾಮನರಾವ್ ದೇಶಪಾಂಡೆಯವರು ಅವರನ್ನು ಹಿಂದುಸ್ತಾನಿ ಗಾಯನ ಪರಂಪರೆಯ ಭಾವನಾವಾದಿ ಪಂಥದ ಪ್ರಮುಖರೆಂದು ಪರಿಗಣಿಸುತ್ತಾರೆ. ಒಂದು ಕಲಾತ್ಮಕ ಚಳುವಳಿಯಾಗಿ ಭಾವನಾವಾದಿ ಪಂಥದ ಪ್ರಮುಖ ಉದ್ದೇಶ ಕೇವಲ ಶ್ರೋತೃಗಳಿಂದ ಭಾವನಾತ್ಮಕ ಪ್ರತಿಕ್ರಿಯೆಯನ್ನು ಹೊರಹೊಮ್ಮಿಸುವುದಲ್ಲ. ಬದಲಾಗಿ ಅದರ ಪ್ರಮುಖ ಉದ್ದೇಶ ಆ ಇಡೀ ಪ್ರಕ್ರಿಯೆಯಲ್ಲಿ ಶ್ರೋತೃಗಳು ಪಾಲ್ಗೊಳ್ಳುವಂತೆ ಅವರನ್ನು ಆಹ್ವಾನಿಸುವುದಾಗಿದೆ. ಈ ಮಟ್ಟಿಗೆ ದೇಶಪಾಂಡೆಯವರು ಕುಮಾರ ಗಂಧರ್ವ ಅವರನ್ನು ಕಿಶೋರಿ ಅಮೋಣ್ಕರ್ ಹಾಗೂ ಪಂಡಿತ್ ಜಸ್‌ರಾಜ್ ಅವರ ಪೂರ್ವಿಕರನ್ನಾಗಿ ಪರಿಗಣಿಸುತ್ತಾರೆ.


**ಬಾಲ್ಯ ಮತ್ತು ಬೆಳವಣಿಗೆ**

ಕುಮಾರ ಗಂಧರ್ವರು ಹುಟ್ಟಿದ್ದು ಉತ್ತರ ಕರ್ನಾಟಕದ ಬೆಳಗಾವಿಯಲ್ಲಿ. ಅವರ ಹೆಸರು ಶಿವಪುತ್ರಪ್ಪ ಸಿದ್ಧರಾಮಪ್ಪ ಕೊಂಕಾಳಿ. ಸಂಗೀತದಲ್ಲಿ ಆ ಎಳೆಯನಿಗಿದ್ದ ಅಪಾರ ಪ್ರತಿಭೆಯನ್ನು ಗುರುತಿಸಿದ ವೀರಶೈವ ಗುರುಗಳು ಆ ಮಗುವನ್ನು 'ಕುಮಾರ ಗಂಧರ್ವ' ಎಂದು ಕರೆದರು. ಕುಮಾರರ ತಂದೆ ಸಿದ್ಧರಾಮಪ್ಪನವರು ಕಿರಾನಾ ಘರಾನೆಯ ಉಸ್ತಾದ್ ಅಬ್ದುಲ್ ಕರೀಂಖಾನ್ ಅವರ ಅನುಯಾಯಿ ಮತ್ತು ಉತ್ತರ ಕರ್ನಾಟಕದ ಅತ್ಯಂತ ಪ್ರಭಾವಶಾಲಿ ಸಂಗೀತಗಾರರಾಗಿದ್ದ ಪಂಚಾಕ್ಷರಿ ಬುವಾ ಅವರ ಆಪ್ತಮಿತ್ರ. ಹಾಗಾಗಿ ಕುಮಾರ ಬೆಳೆದದ್ದು ಸಂಗೀತಮಯ ವಾತಾವರಣದಲ್ಲಿ.

ಶಾಸ್ತ್ರೀಯ ಸಂಗೀತದ 78 ಆರ್‌ಪಿಎಂ ಮುದ್ರಿಕೆಗಳನ್ನು ಬಾಲಕ ಕುಮಾರ ತುಂಬಾ ಆಸಕ್ತಿಯಿಂದ ಕೇಳುತ್ತಿದ್ದ. ಅಷ್ಟೇ ಅಲ್ಲ ಮಹಾನ್ ಗಾಯಕರು ಹಾಡಿದ ಪ್ರತಿಯೊಂದು ಸ್ವರವನ್ನೂ ಹಾಗೇ ನೆನಪಿಟ್ಟುಕೊಳ್ಳುವ ಒಂದು ಅಲೌಕಿಕವಾದ ವಿಲಕ್ಷಣ ಕೌಶಲವನ್ನು ರೂಢಿಸಿಕೊಂಡಿದ್ದ. ಅವರು ಹಾಡಿದ್ದನ್ನು ಯಥಾವತ್ ಹಾಡುತ್ತಿದ್ದ. ಹೀಗೆ ಅನುಕರಿಸುವಾಗ ಕುಮಾರ ಗಂಧರ್ವರಲ್ಲಿ ಆ ಕಲಾವಿದರ ಸಂಗೀತಾತ್ಮಕತೆಯ ಬಗ್ಗೆ ಅಪಾರ ಗೌರವ ಕಂಡುಬರುತ್ತಿತ್ತೇ ಹೊರತು ಲೇವಡಿ ಮಾಡುವ ಅಥವಾ ಅಣಕಿಸುವ ಧೋರಣೆ ಸ್ವಲ್ಪವೂ ಇರಲಿಲ್ಲ. ಅವರ ಗಾಯನಪ್ರತಿಭೆ ಮೊದಲಬಾರಿ ಬೆಳಕಿಗೆ ಬಂದದ್ದು 1936ರಲ್ಲಿ ನಡೆದ ಪ್ರತಿಷ್ಠಿತ ಸಂಗೀತ ಸಮಾರೋಹವೊಂದರಲ್ಲಿ. ಖ್ಯಾತ ಸಂಗೀತಗಾರರೆಲ್ಲ ಸೇರಿದ್ದ ಆ ವಿದ್ವತ್‌ಸಭೆಯಲ್ಲಿ ಕುಮಾರ ಹಾಡಿದ್ದು ಕೇವಲ ಅರ್ಧಗಂಟೆ. ಆದರೆ ಅದು ಬೀರಿದ ಪರಿಣಾಮ ಮಾತ್ರ ಅಗಾಧ. ಜನಸಮೂಹ ಅವರ ಸಂಗೀತವನ್ನು ಅಪಾರವಾಗಿ ಮೆಚ್ಚಿ,







ಕೊಂಡಾಡಿತು. ಏಕಾಏಕಿ ತನ್ನತ್ತ ಹರಿದು ಬಂದ ಮೆಚ್ಚುಗೆಯ ಮಹಾಪೂರ, ಬಹುಮಾನಗಳಿಂದ ವೇದಿಕೆಯ ಮೇಲಿದ್ದ ಹನ್ನೆರಡರ ಪೋರ ತಬ್ಬಿಬ್ಬಾಗಿಬಿಟ್ಟಿದ್ದ.

ಕುಮಾರನ ಪ್ರತಿಭೆಯನ್ನು ಮನಗಂಡ ಪ್ರೊ.ಬಿ.ಆರ್. ದೇವಧರ್ (1902–89) ಕುಮಾರನನ್ನು ತಮ್ಮ ಮಗನಂತೆಯೇ ಬೆಳೆಸಿದರು. ಆ ಕಾಲಕ್ಕೇ ದೇವಧರ್‌ಗೆ ಅತ್ಯಾಧುನಿಕವಾದ ದೃಷ್ಟಿಕೋನವಿತ್ತು. ಅವರು ಕುಮಾರನ ಪಾಲಿಗೆ ಒಬ್ಬ ಮಾದರಿ ಗುರುವಾದರು. ಬಾಲಕನ ಸಂಗೀತಾಭ್ಯಾಸಕ್ಕೆ ಅತ್ಯಂತ ಸೂಕ್ತ ವಾತಾವರಣವನ್ನು ಒದಗಿಸಿಕೊಟ್ಟರು.

ಗ್ವಾಲಿಯರ್ ಘರಾನೆಯ ವಿಷ್ಣು ದಿಗಂಬರ್ ಪಲುಸ್ಕರ್ ಅವರಲ್ಲಿ ಗಾಯನದ ತಾಲೀಮು ಪಡೆದಿದ್ದ ಪ್ರೊ. ದೇವಧರ್ ತಮ್ಮ ಇಡೀ ಬದುಕನ್ನು ಸಂಗೀತವನ್ನು ಸಂಗ್ರಹಿಸಿ, ಅದನ್ನು ಉಳಿದವರಿಗೆ ತಲುಪಿಸುವುದಕ್ಕಾಗಿಯೇ ಮುಡುಪಾಗಿಟ್ಟಿದ್ದರು. ಪರದೆಯ ಎದುರಿಗೇ ಕುಳಿತು ವಾದ್ಯಮೇಳವನ್ನು ನುಡಿಸುತ್ತಿದ್ದ ಮೂಕಿ ಚಲನಚಿತ್ರ ಯುಗದಿಂದ ಹಿಡಿದು ಟಾಕಿ ಯುಗದವರೆಗೆ ಹಲವಾರು ಚಲನಚಿತ್ರಗಳಿಗೆ ಅವರು ಸಂಗೀತ ಸಂಯೋಜಿಸಿದ್ದರು. ಅವರು ಆ ಕಾಲದ ಆದ್ಯ ರಚನಕಾರರು ಹಾಗೂ ವಾದ್ಯವೃಂದ ಸಂಯೋಜಕರು. ಆದರೆ ಕೊನೆಕೊನೆಗೆ ಆ ಕ್ಷೇತ್ರದಲ್ಲಿ ಭ್ರಮನಿರಸನಗೊಂಡು ತಮ್ಮ ಸಂಗೀತಶಾಲೆಯ ಕೆಲಸದಲ್ಲಿ ಮಗ್ನರಾದರು. ಶೈಕ್ಷಣಿಕ ಹುಡುಕಾಟಗಳಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡರು. ಲೇಖಕರಾಗಿ ಹಾಗೂ ಸಂಗೀತಶಾಸ್ತ್ರಜ್ಞರಾಗಿ ಅವರ ಕೊಡುಗೆ ಅಪಾರ. ಮುಂಬೈನಲ್ಲಿದ್ದ ಅವರ ಸಂಗೀತಶಾಲೆಯು ವಿಭಿನ್ನ ಬಗೆಯ ಚಟುವಟಿಕೆಗಳಿಗೆ ಒಂದು ಪ್ರಮುಖ ಕೇಂದ್ರವಾಗಿತ್ತು. ಅಲ್ಲಿಗೆ ಬೇರೆ ಬೇರೆ ಘರಾನೆಯ ಸಂಗೀತಗಾರರು ಬಂದು ಹಾಡಿ, ನುಡಿಸುತ್ತಿದ್ದರು. ಅಲ್ಲಿ ಸಂಗೀತವನ್ನು ಕುರಿತ ಗಂಭೀರ ಚರ್ಚೆಗಳಾಗುತ್ತಿದ್ದವು. ಇಂತಹ ಒಂದು ವೈವಿಧ್ಯಮಯ, ಮುಕ್ತ ವಾತಾವರಣದಲ್ಲಿ ಕುಮಾರ ಗಂಧರ್ವರ ಸಂಗೀತದ ಬದುಕು ರೂಪುಗೊಂಡಿತು.

ಸುಮಾರು ಹನ್ನೊಂದು ವರುಷಗಳ ಕಾಲ (1936–47) ದೇವಧರರು ಕುಮಾರ ಗಂಧರ್ವರಿಗೆ ಗ್ವಾಲಿಯರ್ ಘರಾನೆಯ ಸಂಗೀತವನ್ನು ಧಾರೆ ಎರೆದರು. ಜೊತೆಗೆ ಸಂಗೀತದಲ್ಲಿ ಸ್ವಂತ ಹಾದಿಯೊಂದನ್ನು ಬೆಳೆಸಿಕೊಳ್ಳುವುದಕ್ಕೂ ಅವಕಾಶಮಾಡಿಕೊಟ್ಟರು. ಯಾವುದೇ ನಿರ್ದಿಷ್ಟ ಘರಾನೆಯ ಕಲಾತ್ಮಕತೆಯ ಕಲ್ಪನೆಯನ್ನೂ ಅವರ ಮೇಲೆ ಹೇರಲಿಲ್ಲ. ಕೆಲವು ಮೂಲದ ಪ್ರಕಾರ ಆ ಅವಧಿಯಲ್ಲಿ ಅಥವಾ ಸ್ವಲ್ಪ ನಂತರ ಅವರು ಭೇಂಡೀ ಬಝಾರ್ ಘರಾನೆಯ ಹಿರಿಯ ಸಂಗೀತಗಾರ್ತಿ ಅಂಜನೀಬಾಯಿ ಮಲ್ಪೇಕರ್ ಅವರಿಂದಲೂ ಕಲಿತರು. ದೇವಧರರ ಬಳಿ ಕಲಿಯಲು ಪ್ರಾರಂಭಿಸಿ ಐದು ವರ್ಷಗಳಾದ ಮೇಲೆ ಅವರು ಸಾರ್ವಜನಿಕವಾಗಿ ಹಾಡಲಾರಂಭಿಸಿದರು. ಅವರ ಅಭಿಮಾನಿಗಳ ಸಂಖ್ಯೆಯೂ ಬೆಳೆಯಲಾರಂಭಿಸಿತು. ಆದರೆ ಕಲಾತ್ಮಕತೆಯನ್ನು ಕುರಿತಂತೆ ಒಂದು ಬಗೆಯ ಸಂದಿಗ್ಧ ಅವರನ್ನು ಕಾಡುತ್ತಲೇ ಇತ್ತು. ಘರಾನೆಯನ್ನಾಧರಿಸಿದ ಸಂಗೀತದಿಂದ ಸಿಗಬಹುದಾಗಿದ್ದ ಸುರಕ್ಷೆಯ ಕವಚವನ್ನು ಕುಮಾರ ಗಂಧರ್ವರು ತ್ಯಜಿಸಿಬಿಟ್ಟಿದ್ದರು. ಆದರೆ ಸಂಗೀತದಲ್ಲಿ ಅವರಿಗಿನ್ನೂ ಬಲವಾದ ಹಿಡಿತ ಸಿದ್ಧಿಸಿರಲಿಲ್ಲ. ಹಾಗಾಗಿ ಅವರಿಗೆ ತಮ್ಮದೇ ಎಂದು ಹೇಳಿಕೊಳ್ಳಬಹುದಾದ ವಿಶಿಷ್ಟ ಶೈಲಿಯೊಂದು ಇನ್ನೂ ದಕ್ಕಿರಲಿಲ್ಲ. ಈ ಹಂತದಲ್ಲಿ (1947) ತಮಗೆ ಕ್ಷಯರೋಗವಿದೆ ಎಂದು ತಿಳಿದಾಗ, ಅವರ ಸ್ವಂತಿಕೆಯ, ವಿಶಿಷ್ಟ ಶೈಲಿಯ ಹುಡುಕಾಟ ಮತ್ತಷ್ಟು ತೀವ್ರವಾಯಿತು.

ಕ್ಷಯರೋಗದಿಂದ ಸಂಪೂರ್ಣ ಗುಣಮುಖರಾಗಲು ಅವರಿಗೆ ಐದು ವರ್ಷ ಬೇಕಾಯಿತು. ಇದೂ ಕೂಡ ಸಾಧ್ಯವಾಗಿದ್ದು ಅವರಿಗಿದ್ದ ಅಗಾಧ ಆತ್ಮಬಲದಿಂದ. ಈ ಅವಧಿಯಲ್ಲಿ ಅವರು ಒಣಹವೆ ಇದ್ದ ಮಧ್ಯಪ್ರದೇಶದ ದಿವಾಸ್‌ನಲ್ಲಿ ನೆಲೆಸಿದರು. ತೀರಾ ಸುಸ್ತಾಗಿದ್ದರು. ಹಾಸಿಗೆ ಬಿಟ್ಟು ಏಳುವುದಕ್ಕೂ ಆಗುತ್ತಿರಲಿಲ್ಲ. ಹಾಗಾಗಿ ಹಾಡುವುದಂತೂ ಕನಸಿನ ಮಾತಾಗಿತ್ತು. ಜೊತೆಗೆ ಶ್ವಾಸಕೋಶದ ತೊಂದರೆ ಇದ್ದದ್ದರಿಂದ ಹಾಡಲೇಬಾರದೆಂದು ವೈದ್ಯರು ಹೇಳಿದ್ದರು. ಅದೊಂದು ಏಕಾಂತದ ಬದುಕಾಗಿತ್ತು. ಆ